**LC 33-13**

# Summer Holidays as Informal Learning Experience

**Prakash Chandra Gautam**

**ಎಲ್ ಸಿ 33-13**

## ಬೇಸಿಗೆ ರಜೆಗಳು ಕಲಿಕಾ ಅನುಭವಗಳಾದಾಗ

**ಪ್ರಕಾಶ್‌ಚಂದ್ರ ಗೌತಮ್**

'ಮಕ್ಕಳು ಶಾಲೆಗೆ ಸೇರುವುದಕ್ಕೂ ಮೊದಲೇ ಅವರ ಕಲಿಕೆ ಆರಂಭವಾಗಿರುತ್ತದೆ ಎಂಬ ಅಂಶವೇ ಈ ಚರ್ಚೆಯ ಮೊದಲ ಹೆಜ್ಜೆ. ಶಾಲೆಯಲ್ಲಿ ಮಗುವಿನ ಕಲಿಕೆಗೆ ಯಾವಾಗಲೂ ಒಂದು ಪೂರ್ವ ಇತಿಹಾಸ ಇದ್ದೇ ಇರುತ್ತದೆ. ಉದಾಹರಣೆಗೆ, ಮಕ್ಕಳು ಅಂಕಗಣಿತವನ್ನು ಶಾಲೆಯಲ್ಲಿ ಕಲಿಯಲಾರಂಭಿಸುತ್ತಾರೆ. ಆದರೆ ಅದಕ್ಕೂ ಎಷ್ಟೋ ಮೊದಲೇ ಪ್ರಮಾಣದ (quantity) ಬಗ್ಗೆ ಅವರಿಗೆ ಅನುಭವ ಆಗಿರುತ್ತದೆ…' ಎಲ್ ಎಸ್ ವಿಗೋಟ್‌ಸ್ಕಿ, ಮೈಂಡ್ ಇನ್ ಸೊಸೈಟಿ (Mind in Society) ಪುಸ್ತಕದಲ್ಲಿ.

<u>ಕಲಿಕೆಯು ಶಾಲೆಯ ಸವಾಲಿನ ವಾತಾವರಣವನ್ನಷ್ಟೇ ಅವಲಂಬಿಸಿರುವುದಿಲ್ಲ:</u> ಕಲಿಕೆಯಲ್ಲಿ ಸಾಮಾಜಿಕ ಸಂವಹನದ (ಸೇರಿಕೆ/ಹೊಂದಿಕೆ) ಮಹತ್ತ್ವವನ್ನು ವಿಗೋಟ್‌ಸ್ಕಿ ಅವರ ಸಂಪೂರ್ಣ ಕೃತಿ (ಕೆಲಸ) ಬೆಂಬಲಿಸುತ್ತದೆ. ಒಂದು ವ್ಯವಸ್ಥೆಯಾಗಿ, ಸಂವಹನ ನಡೆಸಲು ಹಲವಾರು ಔಪಚಾರಿಕ ಮತ್ತು ಅನೌಪಚಾರಿಕ ಅವಕಾಶಗಳನ್ನು ಶಾಲೆ ಒದಗಿಸುತ್ತದೆ. ಅನೌಪಚಾರಿಕ ಅವಕಾಶಗಳನ್ನು ಸಾಮಾನ್ಯ ಶಾಲೆಗಳಿಗಿಂತ ಪರ್ಯಾಯ ಶಾಲೆಗಳೇ ಹೆಚ್ಚು ಸದುಪಯೋಗ-ಪಡಿಸಿಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಅಂತಹ ಅವಕಾಶಗಳಿಂದ ಕಲಿಯುವುದರಿಂದ ಬದುಕಿಗೆ ಮೌಲ್ಯ ದೊರಕುವುದರ ಜೊತೆಗೆ, ಕೊನೆಯೇ ಇಲ್ಲದಷ್ಟು ಅವಿಸ್ಮರಣೀಯವಾದ ಬಾಲ್ಯದ ಬಹುಮುಖ್ಯ ಭಾಗವಾಗುತ್ತದೆ. ವಯಸ್ಕರಾಗಿ, ನಾವು ನಿಶ್ಚಿತ ವೇಳೆಯಲ್ಲಿ ಕೆಲಸ ಮಾಡುವಂತೆ ಮತ್ತು ನಿಶ್ಚಿತ ವೇಳೆಯಲ್ಲಿ ವಿಶ್ರಾಂತಿ ಪಡೆಯುವಂತೆ ನಮ್ಮ ಮೆದುಳನ್ನು ತರಬೇತುಗೊಳಿಸುವುದನ್ನು ರೂಢಿಸಿಕೊಂಡಿದ್ದೇವೆ. ಅದಕ್ಕಾಗಿ ನಾವು ನಮ್ಮ ವೈಯಕ್ತಿಕ ಇಷ್ಟಾನಿಷ್ಟಗಳನ್ನು ಅಲಕ್ಷಿಸಿ, ನೈಸರ್ಗಿಕ ಪ್ರಕ್ರಿಯೆಯಾಗಿ ಕಲಿಯಲು ಒಂದೊಳ್ಳೆ ಸಮಯ ಮತ್ತು ಅವಕಾಶಕ್ಕಾಗಿ ಕಾಯುತ್ತೇವೆ. ಆದರೆ ಒಂದು ಮಗುವಿಗೆ ನಿಶ್ಚಿತ ಕಾಲಾವಕಾಶದಲ್ಲಿ ಕಲಿಯಲಿ ಎಂದು ಅಪೇಕ್ಷಿಸಲಾಗದು. ಅವರಿಗೆ ಕಲಿಕೆ ಎಂಬುದು ಕಾಲದ ಗೊಡವೆ ಮತ್ತು ಅದಕ್ಕೆ ಸಂಬಂಧಿಸಿದ ಅಂಶಗಳ ಗೊಡವೆ ಇಲ್ಲದ ನಿರಂತರ ಪ್ರಕ್ರಿಯೆ.

### ಬೇಸಿಗೆ ರಜೆ: ಹೊಂದಿಕೊಳ್ಳುವ (ನೆಲೆಗೊಳ್ಳುವ) ಸ್ಥಳಾವಕಾಶ

ಕೆಲಸಗಳನ್ನು, ಯೋಜನೆಗಳನ್ನು ಪೂರ್ತಿಗೊಳಿಸುವುದು, ಸಾಮಾಜಿಕ ಹಾಗೂ ಭಾವನಾತ್ಮಕ ಹೊಂದಾಣಿಕೆಗಳು, ಮನೆಗೆಲಸಗಳು, ತರಗತಿಯ ಕೆಲಸಗಳು- ಹೀಗೆ ಮಕ್ಕಳಿಗೆ ಸಾಕಷ್ಟು ಒತ್ತಡಗಳಿರುತ್ತವೆ. ದುರದೃಷ್ಟವಶಾತ್, ನಾವು ನಮ್ಮ ಶಾಲೆಗಳನ್ನು 'ಜೀವನೋಪಾಯ'ಕ್ಕೆ ತಯಾರು ಮಾಡುವ ಕೇಂದ್ರಗಳಾಗಿ ನಿರ್ಮಿಸಿದ್ದೇವೆಯೇ ಹೊರತು 'ಜೀವನ'ವಾಗಿ ಅಲ್ಲ. ದೃಷ್ಟಿಕೋನ ಕಿರಿದಾಗಿರಬಹುದು; ನಾವು ನಮ್ಮ ಮಕ್ಕಳನ್ನು ವೈದ್ಯರೋ, ಇಂಜಿನಿಯರುಗಳೋ ಆಗುವಂತೆ ಒತ್ತಡ ಹೇರುತ್ತಲೇ ಇರುತ್ತೇವೆ ಅಥವಾ ಬದುಕಿನ ಕಠಿಣ ಪರಿಸ್ಥಿತಿಗಳನ್ನು ಎದುರಿಸುವಂತೆ ಯಾವುದಾದರೂ ರೂಪದಲ್ಲಿ ತಯಾರು ಮಾಡುತ್ತೇವೆ. ಅಂತಹ ಸ್ವಯಂ ನಿರ್ಮಿತ ಉನ್ನತ ನಿರೀಕ್ಷೆಗಳ ಮಧ್ಯೆ ಒಂದು ಮಗು, ತನ್ನ ಹೆತ್ತವರ ಅಪೂರ್ಣ / ಈಡೇರದ ಬಯಕೆಗಳನ್ನು ಪೂರೈಸುವ ಉದ್ದೇಶಕ್ಕಾಗಿ ಬದುಕುವ ಒತ್ತಡವನ್ನು ಅನುಭವಿಸಬೇಕಾಗುತ್ತದೆ.

ಅಂತಹ ಎಲ್ಲ ಬಗೆಯ ಒತ್ತಡಗಳಿಂದ ಬಿಡುವು ಪಡೆಯುವ ಅವಕಾಶವೇ ಬೇಸಿಗೆ ರಜೆ. ಮಕ್ಕಳು ಈ ಎಲ್ಲ

ಒತ್ತಡಗಳಿಂದ ದೂರವಾಗಿ, ಬೇಸಿಗೆ ರಜೆ ಎಂಬುದು, ಸ್ವಂತಕ್ಕಾಗಿ ಕಳೆಯುವ ಅವಕಾಶವಾಗಬೇಕು. ಬೇಸಿಗೆ ರಜೆಗೂ ಮೊದಲು ಮುಗಿದ ಪರೀಕ್ಷೆಗಳಲ್ಲಿ ಮಕ್ಕಳು ಹೇಗೆ ಬರೆದರು, ಎಷ್ಟು ಅಂಕ ಗಳಿಸಿದರು, ಯಾವ ಶ್ರೇಣಿ ಗಳಿಸಿದರು ಎಂಬ ಬಗ್ಗೆ ಪ್ರತಿಕ್ರಿಯೆಗಳ ಮೂಲಕ, ನಾವು ನಮ್ಮ ಹತಾಶೆ ಮತ್ತು ಜಿಗುಟುತನವನ್ನು ವ್ಯಕ್ತಪಡಿಸುತ್ತೇವೆ. ಆದ್ದರಿಂದ, ಎಲ್ಲ ವಯಸ್ಸಿನ ಮಕ್ಕಳಿಗೂ ಔಪಚಾರಿಕ ಶಾಲಾ ವ್ಯವಸ್ಥೆಯ ಕಿರಿಕಿರಿಯಿಂದ, ಏಕತಾನತೆಯಿಂದ ಬಿಡುಗಡೆ ನೀಡುವ ಅವಕಾಶವೇ ಬೇಸಿಗೆ ರಜೆಗಳು.

## ನಗರೀಕೃತ ಸಂದರ್ಭದಲ್ಲಿ ರಜೆ (ಬೇಸಿಗೆ ರಜೆ)

ಇದು ಹೋಲಿಕೆಯ ವಿಷಯವಲ್ಲ. ಆದರೆ, ನಗರ ವ್ಯವಸ್ಥೆಯಲ್ಲಿ ಅನೌಪಚಾರಿಕ ಕಲಿಕೆಯ ಅವಕಾಶಗಳನ್ನು ಹಾಳು ಮಾಡಲಾಗಿರುತ್ತವೆ ಇಲ್ಲವೇ ಕಡಮೆ ಮಾಡಲಾಗಿರುತ್ತದೆ. ಆಕರ್ಷಕ (ಫ್ಯಾನ್ಸಿ) ತರಬೇತಿ ಕೇಂದ್ರಗಳು, ಟ್ಯೂಷನ್ ತರಗತಿಗಳು, ಅಬ್ಯಾಕಸ್ (ಮಣಿಚೌಕಟ್ಟು) ಗಣಿತ, ಬುದ್ಧಿ ಬೆಳವಣಿಗೆ, ಯೋಗ, ಕರಾಟೆ ಮುಂತಾದುವು ಈ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿಕೊಂಡಿರುವ ಹೆತ್ತವರ ಕನಸುಗಳನ್ನು ಲಾಭಕರವಾಗಿ ಬಳಸಿಕೊಂಡಿವೆ. ರಜಾ ದಿನಗಳಲ್ಲೂ ತಮ್ಮ ಮಕ್ಕಳ ಕಲಿಕೆ ನಿಲ್ಲಬಾರದು ಎಂದು ಆಶಿಸುವ ಕಾರಣ ಅವರು ರಜೆಯಲ್ಲೂ ಮಕ್ಕಳನ್ನು ಬೇರೆ ಬೇರೆ ರೀತಿಯ ತರಗತಿಗಳಿಗೆ ಕಳುಹಿಸುತ್ತಾರೆ. ದುರದೃಷ್ಟವಶಾತ್, ನಮ್ಮ ಮಾಧ್ಯಮ, ಸಾಮಾಜಿಕ ಮಾಧ್ಯಮ ಕೂಡಾ ಒಂದು ಕಾಲ್ಪನಿಕ ಜಗತ್ತನ್ನು ಸೃಷ್ಟಿಸಿದ್ದು, ಸ್ಪರ್ಧೆಗಳು, ತಜ್ಞರ ಪ್ರತಿಸ್ಪಂದನ, ಚಾಂಪಿಯನ್‌ಶಿಪ್‌ನಂತಹ ಮಾರುಕಟ್ಟೆ ತಂತ್ರಗಳಿಂದ ಆಕರ್ಷಣೀಯವಾಗಿರುವ ವಾಣಿಜ್ಯಿಕ ಜಗತ್ತಿಗೆ ಮಕ್ಕಳನ್ನು ಸೆಳೆಯುತ್ತಿವೆ.

## ಇತರ ಸಂದರ್ಭಗಳು

ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಸಿಗುವಸಮೃದ್ಧಿಯನ್ನು ಮಕ್ಕಳು ಅನುಭವಿಸಬಹುದಾದರೆ, ಅದುವೇ ರಚನಾತ್ಮಕವಲ್ಲದ ಮತ್ತು ಅಸಂಘಟಿತ ಕಾಲದ ಕೊಡುಗೆ. ಇದು ಮೆಟ್ರೊಗಳಲ್ಲಿ ಅಪರೂಪಕ್ಕೆ ಸಿಗುವ ಅನುಭವ. ಗ್ರಾಮೀಣ ವ್ಯವಸ್ಥೆಯಲ್ಲಿ, ಕುಟುಂಬಗಳಲ್ಲಿ ಅವುಗಳದ್ದೇ ಆದ ಕಷ್ಟಗಳು, ಹೋರಾಟಗಳು ಮತ್ತು ಸವಾಲುಗಳಿದ್ದರೂ, ಪರಸ್ಪರರ ಬಗ್ಗೆ ಪ್ರೀತಿ ಮತ್ತು ಗೌರವ ಹೊಂದಿರುತ್ತಾರೆ. ಬುಡಕಟ್ಟು ಗ್ರಾಮಗಳಲ್ಲಿ ತಮ್ಮ ಅತಿಥಿಗಳನ್ನು ಬರಮಾಡಿಕೊಂಡು, ಚಹಾ, ನೀರು, ಆಹಾರವನ್ನು ಕೊಡುತ್ತಾರೆ. ದುಬಾರಿ ಮತ್ತು ಆಕರ್ಷಕ ಮಾದರಿಗಳು ಅವರ ಮಾಸಿಕ ಖರ್ಚುವೆಚ್ಚದ ಇತಿಮಿತಿಗೆ ಕೈಗೆಟುಕವಂತಹುದಲ್ಲ. ಆದರೆ, ಆತಿಥ್ಯವನ್ನು ಮನಃಪೂರ್ವಕಾಗಿ, ಹೃದಯದಿಂದ ಮಾಡುತ್ತಾರೆ. ಅಂತಹ ಜನರೊಂದಿಗೆ ರಜಾ ದಿನಗಳನ್ನು ಕಲಿಯುವ ಮಕ್ಕಳು ಕೂಡಾ ಅದೇ ರೀತಿಯ ಗೌರವ, ಸಾಮಾಜಿಕ ಹೊಂದಾಣಿಕೆ, ಜನರೊಂದಿಗೆ ಮಾತುಕತೆ ಮುಂತಾದ ಮೌಲ್ಯಗಳನ್ನು ಕಳೆಯುತ್ತಾರೆ. ಮಾನವ ಸಂವಾದ, ಪರಸ್ಪರ ಭೇಟಿ, ಜತೆಯಾಗಿರುವುದರ ಮೌಲ್ಯವನ್ನು ಮಕ್ಕಳು ಅರ್ಥ ಮಾಡಿಕೊಳ್ಳುತ್ತಾರೆ. ಅಂತಹ ಸಾಮಾಜಿಕ ರಚನೆಗಳು (ವ್ಯವಸ್ಥೆಗಳು) ಜೀವನದ ಕಠಿಣ ಪರಿಸ್ಥಿತಿಗಳಲ್ಲಿ ಹೋರಾಡಲು ಶಕ್ತಿ ಕೊಡುತ್ತದೆ. ಕೌಟುಂಬಿಕ ಸಮಸ್ಯೆಗಳನ್ನು ಅಲ್ಲಿ ಇಡೀ ಸಮುದಾಯದ ಸಮಸ್ಯೆಗಳಾಗಿ ಕಾಣಲಾಗುತ್ತವೆ.

ಗ್ರಾಮೀಣ ಮತ್ತು ಅರೆ ಗ್ರಾಮೀಣ ಭಾಗಗಳಲ್ಲಿ, ವೈವಿಧ್ಯ ಎಂಬುದು ಬಹಳ ದೊಡ್ಡ ಸಾಮಾಜಿಕ ಸಂಪತ್ತು ಆಗಿದ್ದು, ಭವಿಷ್ಯದಲ್ಲಿ ಅದು ಅವರ ಬದುಕಿನಲ್ಲಿ ಕಲಿಕೆಯನ್ನು ರೂಪಿಸಿ, ಅವರ ಬದುಕಿಗೆ ಹೊಸ ಆಯಾಮವನ್ನು ನೀಡುತ್ತದೆ. ಅವಕಾಶ ವಂಚಿತ ಸಮಾಜೋ-ಆರ್ಥಿಕ ಹಿನ್ನೆಲೆಗಳಿಂದ ಬಂದ ಆದರೆ ತದನಂತರ ಸಮಾಜದ ಮುಖ್ಯವಾಹಿನಿ ಶಿಕ್ಷಣ ವ್ಯವಸ್ಥೆಯಲ್ಲಿ ಯಶಸ್ವಿಯಾಗಿ ಸೇರಿಸಲ್ಪಟ್ಟ ಮಕ್ಕಳಿಗಾಗಿ, ಸಿಸ್ಟರ್ ಸಿರಿಲ್ ಅವರು ಬಳಸಿದ ಪದ 'ರೇನ್‌ಬೊ ಚಿಲ್ಡ್ರನ್' ಅಂದರೆ 'ಕಾಮನಬಿಲ್ಲಿನ ಮಕ್ಕಳು'. ಈ ಮಕ್ಕಳಲ್ಲಿ, ಏಕರೂಪದ ಸಮಾಜೋ-ಆರ್ಥಿಕ ಹಿನ್ನೆಲೆಗಳುಳ್ಳ ನಮ್ಮ ಹೆಚ್ಚಿನ ಶಾಲೆಗಳಲ್ಲಿ ಅನುಭವಕ್ಕೆ ಬಾರದ ಛಾಯೆಗಳು ಮತ್ತು ಭಾವನೆಗಳಿರುತ್ತವೆ. ಆದರೂ, ಅವರು ಅಭಿಪ್ರಾಯ ವ್ಯತ್ಯಾಸವನ್ನು, ವೈಯಕ್ತಿಕ ಗುರುತುಗಳನ್ನು

ಅರ್ಥೈಸಿಕೊಳ್ಳುತ್ತಾರೆ. ಹಾಗೂ ಸಂಸ್ಕೃತಿಗಳಿಗೆ ಮತ್ತು ಪದಸಂಪತ್ತುಗಳಿಗೆ ಹೊಂದಿಕೊಳ್ಳುತ್ತಾರೆ, ಅಸಂಘಟಿತ, ರಚನಾತ್ಮಕವಲ್ಲದ ರೀತಿಯಲ್ಲಿ ಮಕ್ಕಳು ಮಾತುಕತೆ ನಡೆಸಿ, ಸಮಯ ಕಳೆದು ಬೇಸಿಗೆ ರಜೆಗಳನ್ನು ಕಳೆದಾಗ, ಈ ಎಲ್ಲ ಮೌಲ್ಯಗಳನ್ನು ಕಲಿಯಲು ಸಾಧ್ಯವಾಗುತ್ತದೆ.

**ಬೇಸಿಗೆ ರಜೆಗಳು- ಆಟವಾಡುವ ಕಾಲಾವಕಾಶ**

ಸಂದರ್ಭದ ಇತಿಮಿತಿಗಳ ಹೊರತಾಗಿ, ಮಕ್ಕಳು ತಮ್ಮ ಸ್ನೇಹಿತರೊಂದಿಗೆ ಕಾಲ ಕಳೆಯುವುದನ್ನು ಎಂದೂ ತಪ್ಪಿಸಿಕೊಳ್ಳುವುದಿಲ್ಲ. ಅವರು ಒಟ್ಟಿಗೆ ಕಲೆತು, ಜೊತೆಗೆ ಆಟವಾಡಿ, ಒಟ್ಟಿಗೆ ಕಾರ್ಯ ನಿರ್ವಹಿಸುತ್ತಾರೆ. ಮಕ್ಕಳು ದೊಡ್ಡವರ ಜಗತ್ತನ್ನು ನಕಲು ಮಾಡಲು ಇಚ್ಛಿಸುತ್ತಾರೆ. ಅದಕ್ಕಾಗಿ ಅವರು ಆಯ್ಕೆ ಮಾಡಿಕೊಳ್ಳುವುದು ಮುಕ್ತ ಆಟವನ್ನು. ಅಂದರೆ ದೊಡ್ಡವರ/ ವಯಸ್ಕರ ಹಾಗೆ ಮಾತನಾಡುತ್ತಾ, ವಯಸ್ಕರದೇ ಪ್ರಪಂಚವನ್ನು ಸೃಷ್ಟಿಸುತ್ತಾರೆ. ಮೂಕಾಭಿನಯ, ಪಾತ್ರಗಳ ಅಭಿನಯ, ಭಾವನೆಗಳ ಅಭಿವ್ಯಕ್ತಿ ಮುಂತಾದುವುಗಳ ಮೂಲಕ ಆ ಲೋಕವನ್ನು ಪ್ರವೇಶಿಸುವುದೆಂದರೆ ಮಕ್ಕಳಿಗೆ ಬಹಳ ಖುಷಿ. ಬೇರೆ ಬೇರೆ ರಚನಾತ್ಮಕ ನೀತಿ- ನಿಯಮಗಳ ಮೂಲಕ ತಮಗೆ ತಾವೇ ಮುಕ್ತಿ ಕೊಟ್ಟುಕೊಳ್ಳುತ್ತಾರೆ, ಸಮಾಜದ ವಿವಿಧ ಪಾತ್ರಗಳನ್ನು ಅಭಿನಯಿಸುವ ಮೂಲಕ ಅಧಿಕಾರದ ರುಚಿ ನೋಡುತ್ತಾರೆ. ಅವರು ತಮ್ಮದೇ ಆದ ಸಂಭಾಷಣೆಗಳನ್ನೂ ಅಭಿನಯಗಳನ್ನೂ ಸೃಷ್ಟಿಸಿಕೊಳ್ಳುತ್ತಾರೆ.

ಒಟ್ಟಾರೆಯಾಗಿ, ಬೇಸಿಗೆ ರಜೆಗಳು ಅನೌಪಚಾರಿಕ ಕಲಿಕೆಯ ಭಾಗವಾಗಿ ನಮ್ಮ ದೇಶದಲ್ಲಿ ಮುಂದಿನ ದಿನಗಳಲ್ಲೂ ಅಸ್ತಿತ್ವದಲ್ಲಿರುತ್ತವೆ. ಯಾಕೆಂದರೆ, ವರ್ಷದ ಸುಡುಬಿಸಿಲಿನ ದಿನಗಳಲ್ಲೇ ದೀರ್ಘಾವಧಿ ರಜೆಗಳೂ ಬಂದರೂ, ಮಕ್ಕಳು ಈ ಅವಧಿಯನ್ನು ಕೇವಲ ತಮಗಾಗಿ ಮೀಸಲಿಟ್ಟು, ಮೌಲ್ಯಯುತ ಕಲಿಕೆಯ ಅನುಭವಗಳಾಗಿಸಿಕೊಂಡು ತಮ್ಮದೇ ರೀತಿಯಲ್ಲಿ ಕಳೆಯುತ್ತಾರೆ.

**ಉಲ್ಲೇಖಗಳು**

ಮೈಂಡ್ ಇನ್ ಸೊಸೈಟಿ, ಎಲ್. ಎಸ್. ವಿಗೋಟ್‌ಸ್ಕಿ, ದ ರೇನ್‌ಬೊ ಪ್ರೋಗ್ರಾಂ, ಸಿಸ್ಟರ್ ಸಿ.ಎಂ. ಮೂನೀ ಎಸ್ಕೇಪ್ ಫ್ರಂ ಚೈಲ್ಡ್‌ಹುಡ್- ದ ನೀಡ್ಸ್ ಅಂಡ್ ರೈಟ್ಸ್ ಆಫ್ ಚಿಲ್ಡ್ರನ್, ಛತ್ತೀಸಗಡದ ಶಂಕರ್‌ದಾ ಅಂಡ್ ದಾಂಡ್‌ಕಿ ಗ್ರಾಮಗಳ ಮಕ್ಕಳೊಂದಿಗೆ ಜಾನ್ ಹಾಲ್ಟ್ ಸಂವಾದ.

**ಪ್ರಕಾಶ್ ಚಂದ್ರ ಗೌತಮ್ ಅವರು ಧಾಮ್‌ತರಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ 2012ರ ಫೆಬ್ರುವರಿಯಿಂದ ಬೋಧನೆ ಮಾಡುತ್ತಿದ್ದಾರೆ. ಅದಕ್ಕೂ ಮೊದಲು, ಮಧ್ಯಪ್ರದೇಶ ಮತ್ತು ಛತ್ತೀಸಗಡದಲ್ಲಿ 16 ವರ್ಷಗಳಿಗೂ ಅಧಿಕ ಕಾಲ ಶಾಲಾ ಶಿಕ್ಷಕರಾಗಿದ್ದರು. ಬುಡಕಟ್ಟು, ಗ್ರಾಮೀಣ ಮತ್ತು ನಗರ ಮಟ್ಟದಲ್ಲಿ ಅವರು ಕೆಲಸ ಮಾಡಿದ್ದಾರೆ. ಅವರು ಒಂದನೇ ತರಗತಿಯಿಂದ 12ನೇ ತರಗತಿಯವರೆಗಿನ ಮಕ್ಕಳಿಗೆ ಇಂಗ್ಲಿಷ್, ಇತಿಹಾಸ, ಜೀವವಿಜ್ಞಾನ ವಿಷಯಗಳನ್ನು ಬೋಧಿಸಿದ್ದಾರೆ. ಅಲ್ಲದೆ, ಛತ್ತೀಸಗಡದ ರಾಯಪುರ ಆಕಾಶವಾಣಿಯಲ್ಲಿ ಉದ್ಘೋಷಕರಾಗಿಯೂ ಕೆಲಸ ಮಾಡಿದ್ದಾರೆ.**

**ಅವರ ಸಂಪರ್ಕಕ್ಕೆ:**

**prakash.gautam@azimpremjifoundation.org**